doc - 524
T.P-2

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಅ ಶೋ ಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing

L. N. Press

Sivarampet, Mysore

Regd No M 1299 — SRI — 30—1—1958

42nd Year - 'Satyavadi' Mysore

ಸತ್ಯವಾದಿ

ಸಂಸ್ಥಾಪಕರು— ಅಂಮನೆ ಸಿಂಸ್ಕೇದಾರ್ ಎಂ. ವಿ ಸುಬ್ಬರಾಯುರು [ಬಿಡಿಪ್ರತಿ 3 ಪೈ

ಪ್ರಮುಖ ವರ್ತಮಾನಗಳಿಗೆ

ಆಕರ್ಷಣೀಯ ಲೇಖನಗಳಿಗೆ

" ಸತ್ಯವಾದಿ " ಪತ್ರಿಕೆಯನ್ನು

ತಪ್ಪದೇ ಓದಿ

ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ ವಾರಾಂತ್ಯ ಪತ್ರಿಕೆ

ವಾರ್ಷಿಕಚಂದಾ ಅಂಚೆವೆಚ್ಚಸೇರಿ 1-80

ಮಗುವಿನ ರಕ್ಷಣೆ

ಭದ್ರಾವತಿ 28 — ಬಿದರೆ ಮತ್ತು ಭದ್ರಾವತಿ ನಡುವೆ ಓಡಾಡುವ ರೈಲಿಗೆ ಹುತೂರು ಒಳಿ ಕಂಬಿಗಳ ಮಧ್ಯೆ ಮಗುವೊಂದು ಹೋಗುತ್ತಿದ್ದುದು ಕಂಡು ಒಂದು ಡ್ರೈವರ್ ಎಂ ಡಿ ಪರೀಕ್ಷರು ಮಗುವನ್ನು ರಕ್ಷಿಸಲು ಬ್ರೇಕುಹಾಕಲಾಗಿ ಅದು ಹಿಡಿಯುಲಿಲ್ಲ ವಗುವು ಖಂಡಿತಸಾಯುವುದೆಂಬುದನ್ನು ಫೈರ್‌ಮೆನ್ ರಾಜು ಗವನಿಸಿ ಕೆಳಗೆ ಧುಮುಕಿ ಮಗುವನ್ನು ಕಂಬಿಯಿಂದಾಚೆ ಕಳ್ಳಿದನು ಕಳ್ಳಿದ ಬಗ್ಗೆ ಮಾತ್ರ ವಗುವಿಗೆ ಸ್ವಲ್ಪ ಗಾಯವಾಯಿತು.

ಜಿಣಿ

ಸೇರ್ಪಡೆ ಆಪೈರು

ನವ ದೆಹಲಿ 28 — ಜಮ್ಮು ಮತ್ತು ಕಾಶ್ಮೀರ ಜನತೆಯು ಭಾರತದೊಡನೆ ಸೇರ್ಪಡೆತೀರ್ಮಾನವನ್ನು ಜಗತ್ತಿನ ಯಾವ ಶಕ್ತಿ ಆಗಲಿ, ಯಾವನೊಬ್ಬ ವ್ಯಕ್ತಿ ಆಗಲಿ ಬದಲಾವಣೆ ಮಾಡಲು ಸಾಧ್ಯವಿಲ್ಲ ವೆಂದು ಲಡಕ್ಕಿನ ಲಾಮಾ ಕುಷಕ್ ಬಕುಲಾ ತಿಳಿಸಿದ್ದಾರೆ

ಇಸ್ಲಾಂ ಶಿಕ್ಷಣ

ಕರಾಚಿ 28 — ಪಾಕಿಸ್ತಾನದಲ್ಲಿನ ಎಲ್ಲಾ ಶಾಲೆಗಳಲ್ಲೂ ಇಸ್ಲಾಂ ಶಿಕ್ಷಣವನ್ನು ಮೆಟ್ರಿಕ್ಯುಲೇಷನ್ ವರಿಗೆ ಕಡ್ಡಾಯ ಮಾಡಬೇಕೆಂದು ಪಾಕಿಸ್ತಾನ ಶಿಕ್ಷಣ ಸಲಹಾ ಸಮಿತಿ ಶಿಫಾರಸು ಮಾಡಿದೆ

——

ಬೂಧಾ ನದಿ ಮೇಲಿನ ಸೇತುವೆ ಕುಸಿದು ಮೇಲೆ ಬರುತ್ತಿದ್ದ ಮೋಟಾರ್ ಬಸ್ಸಿಗೆ 15 ಅಡಿಗಳ ಆಳದಲ್ಲಿ ನದಿಗೆ ಬಿದ್ದಿತು ಓರ್ವ ಪಕ್ಷ, ನಾಲ್ಕು ಜನ ಗಾಯಗೊಂಡರು ಎಂದು ಲೂಧಿಯಾನಾ ವಾರ್ತೆ.

ನಾಯಿಗಳ ಚಾತುರ್ಯ

ನಾಗಪಟ್ಟಣದ ಹತ್ತಿರದ ವೆಲಂಗಾನಿ ನದಿ ದಡದ ಹತ್ತಿರ ತಲೆಯಿಲ್ಲದ ದೇಹವೊಂದು ಬಿದ್ದುದನ್ನು ಪತ್ತೆಮಾಡಲು 2 ಪೋಲೀಸು ನಾಯಿಗಳು ಅಲ್ಲಿಗೆ ಕಳುಹಿಸಲ್ಪಟ್ಟಿದ್ದವು. ಆ ನಾಯಿಗಳು ತಲೆ ಹೊತಿದ್ದ ಸ್ಥಳವನ್ನು ತೋರಿಸಿದ್ದಲ್ಲದೆ ಈ ಖೂನಿ ಮಾಡಿದವನ ಗುರುತಿಸಲು ಹತ್ತಿರಕ್ಕೂ ಪೋಲೀಸು ತಂಡವನ್ನು ಕರೆದು ಕೊಂಡುಹೋಯಿತು ಗುರುತಿಸಲಿನಲ್ಲಿದ್ದವನು ತಾನು ಖೂನಿ ಮಾಡಿದ್ದು ನಿಜವೆಂದು ತಿಳಿಸಿದನೆಂದು ವೆಂದರಾಸು ವಂದಿ

ಶರಾವತಿ ಯೋಜನೆ ಉದ್ಘಾಟನೆ

ಫೆಬ್ರವರಿ 5 ನೇ ತಾ|| ಕೇಂದ್ರ ಸರಕಾರದ ನೀರಾವರಿ ಮತ್ತು ವಿದ್ಯುತ್ ಮಂತ್ರಿ ಶ್ರೀ ಎಸ್. ಕೆ ಪಾಟೀಲರು 40 ಕೋಟಿ ರೂ. ಯೋಜನೆಯ ಶರಾವತಿ ಹೈಡಲ್ ಪ್ರಾಜೆಕ್ಟನ್ನು ಉದ್ಘಾಟಿಸುವರು ಮತ್ತು ಒಂದು ಬಕೆಟು ಸಿಮೆಂಟು ಕಾಂಕ್ರೀಟು ಹಾಕುವರು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸುವರು

ಬ್ರಾಹ್ಮಣರು ಸೇರಿಲ್ಲ

ಇಂದೂರು 29 —ಹರಿಜನರ ಮೇಲೆ ನಡೆದ ಆಕ್ರಮಣದ ರಾವ ನಾಥಪುಂದ ಘಟನೆಗಳಲ್ಲಿ ಬ್ರಾಹ್ಮಣರು ಸೇರಿರಲಿಲ್ಲ ವೆಂದು ಪ್ರಧಾನಿ ಪಂಗಿ ನೆಹರು ಅಖಿಲ ಭಾರತ ನಿಮ್ನ ವರ್ಗ ಲೀಗಿನ ಅಧ್ಯಕ್ಷ ಶ್ರೀ ಧನಲಾಲ ಲೌಡಮಾಲಿರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ

ಪ್ರಾಂತೀಯ ಸ್ವತಂತ್ರಕ್ಕೆ ಶ್ರಮ

ತಮಿಳು ಅಂಸು ಕಜಗಂನ ನಾಯಕ ಶ್ರೀ ಶಿವಜ್ಞಾನ ಗ್ರಾಮಣಿಯವರು ಮುದರಾಸು ರಾಜ್ಯಕ್ಕೆ ಪ್ರಾಂತೀಯ ಸ್ವಾತಂತ್ರ್ಯಕ್ಕಾಗಿ ತಮ್ಮ ಪಕ್ಷ ಶ್ರಮಿಸುವದಾಗಿ ಮದರಾಸಿನಲ್ಲಿ ತಿಳಿಸಿರುವರು.

ಪಾಕಿಸ್ತಾನ ಕ್ಷಿಪಣಿಗಳನ್ನು ಅಪೇಕ್ಷಿಸಿದೆ

ಅಂಕಾರಾ 28 — ಬಾಗ್ದಾದು ಒಪ್ಪಂದದ ಮಂತ್ರಿ ಸಮಿತಿಯಲ್ಲಿ ಪಾಕಿಸ್ತಾನ ಪ್ರಧಾನಿ ಮಲ್ಲಿಕ್ ಫಿರೋಜ್ ಖಾನ್ ನೂನ್ ಒತ್ತಾಯಮಾಡುತ್ತಾ ಸದಸ್ಯ ರಾಷ್ಟ್ರಗಳು ಕ್ಷಿಪಣಿಗಳೊಡನೆ ಸಶಸ್ತ್ರಾಗಬೇಕು ಎಂದಿಂಬರು

ಬಂದಿಗಳಿಂದ ಕೆಲಸ

ತಿರುವೇಂದ್ರಂ 28 — ಇಲ್ಲಿನ ಕೇಂದ್ರ ಬಂದೀಖಾನೆಯಲ್ಲಿರುವ ಬಂದಿಗಳಿಂದ ವಾರ್ಡರುಗಳ ವಸತಿಗಳ ನಿರ್ಮಾಣಕ್ಕೆ ಕೆಲಸ ತೆಗೆದುಕೊಳ್ಳಲಾಗುವದು. ಈ ರೀತಿ ಮಾಡುವದರಿಂದ ರೂ 3 ಲಕ್ಷ 15 ಸಾವಿರ ವೆಚ್ಚದಲ್ಲಿ ರೂ 84 ಸಾವಿರಕ್ಕೆ ಕಡಿಮೆ ಆಗದಂತೆ ಉಳಿಸಬಹುದು

ಹಿಂದಿ ಕಲಿಯಿರಿ

ಭಾರತದೊಡನೆ ತಮ್ಮ ಬಾಂಧವ್ಯ ಭದ್ರಮಾಡಲು ಬ್ರಿಟಿಷರು ಹಿಂದಿ ಕಲಿಯಬೇಕೆಂದು ಆಚಾರ್ಯ ವಿನೋಬಾಭಾವೆ ಹುಬ್ಬಳ್ಳಿಯಲ್ಲಿ ತಿಳಿಸಿದ್ದಾರೆ

ಕ್ಯಾಲೆಂಡರ್ ಸ್ವೀಕಾರ

ಮೈಸೂರಿನ ಪ್ರಸಿದ್ಧ ಪೇಪರ್ ಮತ್ತು ಸ್ಟೇಷನರಿ ವ್ಯಾಪಾರಸ್ಥರಾದ ಶ್ರೀ ಆರ್ ಕೃಷ್ಣಸ್ವಾಮಿಯವರು ಕಳುಹಿಸಿರುವ ಗ್ಯಾಂಜೀಸ್ ಪ್ರಿಂಟಿಂಗ್ ಇಂಕ್ ಸಂಸ್ಥೆಯ ತ್ರಿವರ್ಣ ಚಿತ್ರದಿಂದ ಕೂಡಿದ ಸುಂದರವಾದ ಕ್ಯಾಲೆಂಡರನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದ್ದೇವೆ

——

ಮೈಸೂರು ಉದ್ಯಾನವನ ಸಂಸ್ಥೆ ಆಶ್ರಯದಲ್ಲಿ ಉದ್ಯಾನವನ ಪ್ರದರ್ಶನ ನಾಳೆಯಿಂದ ಫೆಬ್ರವರಿ 2 ರ ವರಿಗೆ ಬೆಂಗಳೂರು ಲಾಲ್‌ಬಾಗಿನಲ್ಲಿ ನಡೆಯುವದು.

ನಮ್ಮ ಭಾರತ

ನದಿಯಾದ'ಸಲ್ಲಿ ಪೋಸ್ಟು ಮಾಡಿದ ಕಾರ್ಡೊಂದು ಕೈರಾದಲ್ಲಿಯ ವಿಳಾಸಕ್ಕೆ ತಲಪಲು 8 ವರ್ಷ 4 ತಿಂಗಳು ಹಿಡಿದ ಸ್ವಾರಸ್ಯ ವಿಷಯವಿದು 2 ಪಟ್ಟಣಗಳು ಗಜರಾತಿನಲ್ಲಿದ್ದು 40 ಮೈಲಿಗಳ ದೂರದಲ್ಲಿವೆ ನದಿಯಾದಿನ ಒಬ್ಬ ವ್ಯಾಪಾರಿಯು 1949 ನೇ ಸೆಪ್ಟೆಂಬರಿನಲ್ಲಿ ಕೈರಾದಲ್ಲಿಯ ತನ್ನ ಸ್ನೇಹಿತನಿಗೆ ಬರೆದಿದ್ದನು ಆ ಕಾಗದವು ತನಗೆ ಈ ಜನವರಿ 20 ರಂದು ತಲುಪಿತೆಂದೂ 23 ರಲ್ಲಿ ತನ್ನ ಸ್ನೇಹಿತನಿಗೆ ಬರೆದಿರುವನು.

——

ಮದರಾಸಿನ ಪಶ್ಚಿಮ ಮಂಬಾಲಂನಲ್ಲಿ ಹೊಸದಾಗಿ ಕಟ್ಟಲಿರುವ ಶ್ರೀ ಶಂಕರಮಠದಲ್ಲಿ ಶ್ರೀ ಆದಿ ಶಂಕರಾಚಾರ್ಯರ ಪಾದುಕಾ ಪ್ರತಿಷ್ಠಾಪನೆ ಶ್ರೀ ಕಾಮಕೋಟಿ ಪೀಠದ ಶಂಕರಾಚಾರ್ಯರ ನೇತೃತ್ವದಲ್ಲಿ ನೆರವೇರಿತು.

ಂ ಂ

ಹಿಂದಿ ಮಾತ್ರ ಭಾರತದ ರಾಷ್ಟ್ರ ಭಾಷೆ ಆಗಬಲ್ಲುದೆಂದು ಆಚಾರ್ಯ ವಿನೋಬಾ ಭಾವೆ ತಿಳಿಸಿರುವದಾಗಿ ಹುಬ್ಬಳ್ಳಿ ವಾರ್ತೆ.

ಂ ಂ

ಕಾಶ್ಮೀರದಲ್ಲಿ ಭಾರತದ ವಸಾಹತು ಸಾಹಿಗೆ ಧಿಕ್ಕಾರ, ಕಾಶ್ಮೀರಕ್ಕೆ ಸ್ವಯಂ ನಿರ್ಣಯಾತ್ಮಕ ಹಕ್ಕು ಬೇಕು, ಕಾಶ್ಮೀರದಲ್ಲಿ ಮತಸಂಗ್ರಹ ಆಗಬೇಕು ಎಂಬ ಘೋಷಣೆಗಳ ಕೈ ಬರಹದ ಭಿತ್ತಿಪತ್ರಗಳು ಎನ್ನಾರ್ಕುಲಂನ ಪ್ರಮುಖ ಸ್ಥಳಗಳಲ್ಲಿ ಅಂಟಿಸಲಾಗಿತ್ತು. ಅಖಿಲ ಭಾರತ ಕಾಶ್ಮೀರ ಫ್ರೆಂಡ್‌ಶಿಪ್ ಫ್ರಂಟ್ ಎಂಬ ಸಂಸ್ಥೆ ಹೆಸರಿದ್ದಿತು. ಆದರೆ ಅಂಥಾ ಸಂಸ್ಥೆ ಎನ್ನಾರ್ಕುಲಂನಲ್ಲಿಲ್ಲ

ಪ್ರಧಾನಿಗಳೊಡನೆ ಭೇಟಿ

ನವ ದೆಹಲಿ 28 — ಭಾರತ ಸರ್ಕಾರದ ಕರೆಯ ಮೇರೆಗೆ ನವ ದೆಹಲಿಗೆ ಪ್ರಜಾತಂತ್ರ ದಿನದ ಸಮಾರಂಭಗಳಲ್ಲಿ ಭಾಗವಹಿಸಲು ಬಂದಿರುವ 30 ಮಂದಿ ಗುಡ್ಡಗಾಡಿನ ಮುಖಂಡರು ಈ ದಿನ ಮಧ್ಯಾಹ್ನ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದರು.

ಸೆಣಬಿನ ಉತ್ಪಾದನೆ

ನವ ದೆಹಲಿ 28 — 1957–58 ರಲ್ಲಿ 1754000 ಎಕರೆಗಳ ವಿಸ್ತೀರ್ಣದಲ್ಲಿ 4088000 ಬೇಲುಗಳಷ್ಟು ಸೆಣಬನ್ನು ಬೆಳೆಯುವ ಉದ್ದೇಶವನ್ನು ಹೊಂದಲಾಗಿದೆ. ಪ್ರತಿ ಬೇಲಿನಲ್ಲಿಯೂ 400 ಪೌಂಡುಗಳಷ್ಟು ಸೆಣಬಿರುವುದು.

ಅಲಂಕರಣ ಸಮಿತಿ

ನವ ದೆಹಲಿ 28 — ಭಾರತ ಸರ್ಕಾರದ ಕಾಮುಗಾರಿ ವಸತಿ ಹಾಗೂ ಪೂರೈಕೆ ಮಂತ್ರಿ ಶಾಖೆಯವರು ಭಾರತ ಸರ್ಕಾರದ ಪ್ರಮುಖ ಭವನವನ್ನು ಅಲಂಕರಿಸುವ ಸಂಬಂಧದಲ್ಲಿ ಸಮಿತಿಯೊಂದನ್ನು ರಚಿಸಿರುವರು.

ಅಮೇರಿಕದ ವಿನಿಮಯ ಸಾಧನೆ

ವಾಷಿಂಗ್ಟ್ — ಕಳೆದ 10 ವರ್ಷಗಳಲ್ಲಿ ಸುಮಾರು 30 ಸಹಸ್ರ ವಿದ್ಯಾರ್ಥಿಗಳೂ ಮತ್ತು ತಜ್ಞರುಗಳೂ 80 ರಾಷ್ಟ್ರಗಳಿಂದ ಅಮೇರಿಕಾಕ್ಕೆ ಬಂದಿದ್ದಾರೆ. ಅಮೇರಿಕದ ಅಂತರಾಷ್ಟ್ರೀಯ ಶೈಕ್ಷಣಿಕ ವಿನಿಮಯ ಕಾರ್ಯಕ್ರಮದ ರೀತ 14 ಸಹಸ್ರ ಮಂದಿ ಅಮೇರಿಕನ್ನರು ವಿದೇಶಗಳಲ್ಲಿ ಅಧ್ಯಯನ ಮಾಡಿದ್ದಾರೆ. ಈ ವರ್ಷ ಅಮೇರಿಕಕ್ಕೆ ಬರಲಿರುವ ಲೀಡರ್ ವಿನಿಮಯ ವರ್ಗದವರಲ್ಲಿ ಯು ಗೋಸ್ಲಾವಿಯಾದ ಒಂದು ಗುಂಪು ಇರುವುದು. ಮುಂದಿನ ವರ್ಷದವರಲ್ಲಿ ಸೋವಿಯೆಟ್ ಯೂನಿಯನ್, ಪೋಲೆಂಡಿನ, ಜೆಕೋಸ್ಲೊವೇಕಿಯಾದ ಮತ್ತು ರುಮೇನಿಯದ ಲೀಡರುಗಳು ಕೆಲವರಿರುವರು. ಮುಂದಿನ ವರ್ಷ ವಿನಿಮಯ ಕಾರ್ಯಕ್ರಮದ ರೀತ್ಯ ವಿದೇಶಗಳಿಂದ 4000 ವಿದ್ಯಾರ್ಥಿಗಳೂ ತಜ್ಞರುಗಳೂ ಅಮೇರಿಕಕ್ಕೆ ಬರಲಿದ್ದಾರೆ. 2200 ಮಂದಿ ಅಮೇರಿಕನ್ನರು ಇತರ ದೇಶಗಳಿಗೆ ಪ್ರಯಾಣ ಮಾಡಲಿದ್ದಾರೆ.

ಕೈಗಾರಿಕಾ ವಸತಿ ಯೋಜನೆ

ಭಾರತ ಸರ್ಕಾರದವರು 1957 ರ ನವೆಂಬರ್ ವರೆಗೆ ವಿವಿಧ ರಾಜ್ಯಗಳು ಮತ್ತು ಸಂಸ್ಥೆಗಳಿಗೆ ಸಾಲ ಮತ್ತು ಸಹಾಯಧನದ ರೂಪದಲ್ಲಿ 254933137 ರೂಗಳನ್ನು 89762 ಗೃಹಗಳನ್ನು ನಿರ್ಮಾಣ ಮಾಡುವ ಸಲುವಾಗಿ ಮಂಜೂರು ಮಾಡಿರುವರು.

ವಿನೋದ

ಒಂದು ಊರಿನಲ್ಲಿ ಒಬ್ಬ ಅಂಗಡಿಯವರು ತನ್ನ ಬಾಕೀದಾರ ಗಿರಾಕಿಗಳಿಗೆ ಈ ರೀತಿ ಸೂಚನೆಯಿತ್ತನು—

ಈ ಅಂಗಡಿಗೆ ಬಾಕಿ ಕೊಡಬೇಕಾದ ಗಿರಾಕಿಗಳು ಕೂಡಲೇ ಬಂದು ಲೆಕ್ಕ ಪೈಸಲ್ಮಾಡಬೇಕು — ನಮ್ಮ ಬಾಕಿದಾರರಿಗೆ ಎಷ್ಟು ಬಾಕಿ ಎನ್ನುವುದು ತಿಳಿಯದಿದ್ದರೆ ಕೂಡಲೇ ಬಂದು ಅದನ್ನು ತಿಳಿದುಕೊಳ್ಳಬೇಕು — ನಾವು ಬಾಕಿ ಕೊಡಬೇಕೆಂದು ತಿಳಿದಿದ್ದು, ಬರಲು ಇಷ್ಟಪಡದವರು, ನಾವು ಅವರನ್ನು ಹಿಡಿಯುವಷ್ಟಕ್ಕೆ ಅನುಕೂಲವಾಗುವಂತೆ ಒಂದೇ ಸ್ಥಳದಲ್ಲಿ ಸ್ವಲ್ಪ ಹೆಚ್ಚು ಕಾಲ ಇರಬೇಕು !

ವುಡ್‌ಲಾಂಡ್ಸ್ 31–1–58 ರಿಂದ
ಅಮೋಘ ಆರಂಭ
ಉತ್ಕೃಷ್ಟ ಕಥಾವಸ್ತುವಿನಿಂದಲೂ, ಮೃದುಮಧುರ ಸಂಗೀತದಿಂದಲೂ ಕೂಡಿದ್ದು
ಪ್ರತಿಸಂಸ್ಥಾದವೂ ನೋಡಿ ಆನಂದಿಸಬೇಕಾದ ಅತ್ಯಮೋಘ ಹಿಂದಿ ಚಿತ್ರ
Dushman ದುಷ್ಮನ್
ನಟವರ್ಗ— ದೇವಾನಂದ್, ಉಷಾಕಿರಣ್, ರಾಧಾಕೃಷ್ಣ, ಪ್ರಭುದಯಾಲ್
ದಿನವಹಿ 3 ಪ್ರದರ್ಶನಗಳು

ಅಪೆರಾ— ಕೀರ್ತಿಯುತ 6 ನೇ ವಾರ
ಮಾಯಾಬಜಾರ್
ಎಸ್. ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಲೀಲಾಂಗಿ
ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ
ಪ್ರತಿ ದಿನ 3 ಆಟಗಳು

ಉಮಾ ಟಾಕೀಸ್ 25–1–58 ರಿಂದ
ಕಾವೇರಿ (ತಮಿಳು) [ದಿನ 3 ಆಟಗಳು]
ನಟವರ್ಗ— ಶಿವಾಜಿ ಗಣೇಶ್, ಪದ್ಮಿನಿ, ಕೃಷ್ಣ, ಮಧುರಂ
ಬೆಳಿಗಿನ ಪ್ರದರ್ಶನ 10–30 ಕ್ಕೆ — ಶಾ || 31 ರಿಂದ 3 ದಿವಸಗಳು ಮಾತ್ರ
PATHFINDER (Technicolor Picture)

SHAKTI
SUDHA
A Superb Tonic

Protect the cow ಗೋ ಸಂರಕ್ಷಣೆ ಮಾಡಿ
ಗೋರಕ್ಷಣಾ ಕಾರ್ಯಕ್ಕೆ ಹೆಚ್ಚು ಪ್ರಚಾರ ನಡೆಯಲಿ
ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ
ಗೋರಕ್ಷಣೆ, ಪಶುಪಾಲನೆ, ಪಶುವೈದ್ಯ, ಶಾಕಾಹಾರ ಮುಂತಾದ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ 8 ಆಣೆ ಅಂಚೆವೆಚ್ಚ
ಬೆಂಬಲಿಗರು ರೂ 10 (ಒಂದೇಸಾರಿ) ಇವರಿಗೆ ಪತ್ರಿಕೆ ಸದಾ ಕೊಡಲಾಗುವುದು
ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು.

Edited, Printed& Published by Dharma Prachara Nirata M S Krishna Rao, at the Satyavadi Press Chamarajapura Mysore